ಸುಮನಾ, ತೆಲಂಗಾಣ
ಮನಸ್ಸಿನ ಮೂರ್ತ ರೂಪ ಹೇಗಿರುತ್ತೆ ರಾಮ್?




ಅಮೀಬಾದಂತೆ.

ರಾಜಶೇಖರ ಹಾದಿಮನಿ, ಧಾರವಾಡ
ಕೆಲವೊಮ್ಮೆ ಹಿರಿಯರೇ ಕಿರಿಯರ ಸರಿದಾರಿಗೆ ಬರದ ಕಾರಣ ಹೊಲ–ಮನೆಗಳು ಹಾಳಾಗಿವೆ. ಹೀಗಿದ್ದಾಗ ಏನ್ಮಾಡೋದು?
ವಿವೇಕಕ್ಕೆ ಬಾಗದವರಿಗೆ ಬೋಧನೆ ವ್ಯರ್ಥ. ದೀಪದಹುಳುವಿಗೆ ಸುಟ್ಟುಕೊಳ್ಳುವುದೇ ಸಂತೋಷ.

ಜೆ. ಪ್ರದೀಪ್ ಕುಮಾರ್, ಹೂವಿನಹಡಗಲಿ
ಅಂದಿನ ಕೆಲಸವನ್ನು ಅಂದೇ ಮಾಡಿದರೆ ಫಲ ಉತ್ತಮವೆಂದು ತಿಳಿದೂ ಕೆಲಸವನ್ನು ಮುಂದೂಡಲು ಕಾರಣ?
‘ನಿಧಾನಮೇ ಪ್ರಧಾನಮು’ ಎಂಬ ಗಾದೆಯಲ್ಲಿರುವ ಅಚಲ ನಂಬಿಕೆ.

ಪಿ. ಜಯವಂತ ಪೈ, ಕುಂದಾಪುರ
ಕುದುರೆಗೂ ಕತ್ತೆಗೂ ವ್ಯತ್ಯಾಸವೇನು?




ಭಿನ್ನಮತ ತೋರಿ ಅರಚುವವನು ಕತ್ತೆ; ರೆಸಾರ್ಟ್‌ನಲ್ಲಿ ವ್ಯಾಪಾರಕ್ಕೆ ದೊರಕುವವನು ಕುದುರೆ.

ಪಿ.ಜೆ. ರಾಘವೇಂದ್ರ, ಮೈಸೂರು
ಹೆಣ್ಣು ಭ್ರೂಣ ಹತ್ಯೆ ಶಿಕ್ಷಾರ್ಹ ಅಪರಾಧ. ಗಂಡು ಭ್ರೂಣ ಹತ್ಯೆ?
‘ಸಮಾನತೆಯ ದ್ಯೋತಕ’ ಎಂದು ಬೇಸಿನ್ನಿನಲ್ಲಿ ಕುಳಿತ ಛಿದ್ರ ಹೆಣ್ಣುಭ್ರೂಣ ಕೂಗಿತಂತೆ.

ಮಲ್ಲಿಕಾರ್ಜುನ, ಸುರಧೇನುಪುರ
ಹುಡುಗರದು ಆಟ; ಯುವಕರದು ತುಂಟಾಟ. ಹಿರಿಯರದು?
ಈಗಲೋ ಆಗಲೋ ಫೈನಲ್ ಟಾಟಾ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ಪೊಲೀಸ್ ಸಿಬ್ಬಂದಿ ಹೆಚ್ಚಾದರೂ ಕಳ್ಳರ ಸಂಖ್ಯೆ ಕಡಿಮೆ ಆಗುತ್ತಿಲ್ಲವಲ್ಲ?
ಇರುವ ಪೊಲೀಸರೆಲ್ಲ ಸರ್ಟಿಫೈಡ್ ಕಳ್ಳರಾದ ಮುಖಂಡರ ಸೇವೆಗೇ ಸಾಲುತ್ತಿಲ್ಲವಂತೆ.

ಬಿ.ಆರ್. ಉಷಾ, ಕೆನಡಾ
ಸ್ಮಶಾನದ ಮುಂದೆ ‘one way’ ಬೋರ್ಡ್ ಹಾಕಿರುವುದು ಯಾಕೆ?
ದೆವ್ವ, ಭೂತ, ಪಿಶಾಚಿಗಳು ಬೋರ್ಡ್ ನೋಡಿ ಊರಿಗೆ ಬರದೆ ಅತ್ತಕಡೆಗೆ ಹೊರಟುಹೋಗಲೆಂದು.

ಬಿ.ವಿ. ಸುರೇಶ್, ಬೆಂಗಳೂರು
ಈ ಗುರುಗಳು/ಸ್ವಾಮೀಜಿಗಳು ವಿದೇಶಿ ಭಕ್ತರನ್ನು ಹೆಚ್ಚಾಗಿ ಆಕರ್ಷಿಸುತ್ತಾರಲ್ಲ, ಏಕೆ?
ನಮ್ಮದಿಗಾಗಿ ವಿದೇಶೀಯರು ಕೊಡುವಷ್ಟು ‘ಬೆಲೆ’ಯನ್ನು ಇಲ್ಲಿನವರು ಕೊಡುವುದಿಲ್ಲವಂತೆ.

ಆರ್. ಮಧುಸೂದನ್, ಹಾಸನ
ಹೆಣ್ಣಿನ ಸೌಂದರ್ಯವನ್ನು ಮೈಮಾಟ ಎನ್ನುವುದೇಕೆ?
ಅವಳ ಚಲನೆಯೇ ಒಂದು ‘Mime ಆಟ’ದಂತೆ ತೋರುವುದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ನಮ್ಮ ಬದುಕು, ಬರಹ ಒಂದೇ ರೀತಿಯಾಗಿ ಇರುವುದಿಲ್ಲವಲ್ಲ, ಏಕೆ?
ಬರಹಕ್ಕೆ ನಮ್ಮದೇ ಹಾಳೆ. ಬದುಕಿಗೆ ಇತರರದೂ ಸೇರುವುದರಿಂದ ಹಾಳೇ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ಬುದ್ಧಿವಂತರು ತುಂಬಾ ಪ್ರಶ್ನೆ ಕೇಳುತ್ತಾರಂತೆ. ಉತ್ತರಿಸಲು ಅಷ್ಟೇ ಬುದ್ಧಿ ಬೇಕೆ?
ಹಾಗೇನಿಲ್ಲ. ಬುದ್ಧಿವಂತರ ಎಷ್ಟೋ ಪ್ರಶ್ನೆಗಳು ದಡ್ಡದಡ್ಡಾಗಿರುತ್ತವೆ.

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ
ತಮ್ಮ ಬರಹಗಳಿಂದಲೇ ಬರಹಗಾರರೆಂದು ತಿಳಿಯುವುದಾದರೂ ಅವರ ಹೆಸರ ಮುಂದೆ ಲೇಖಕ/ಕಿ ಎಂಬ ಪದವೇಕೆ?
ಕದ್ದು ಬರೆಯುವರಲ್ಲ, ಅನ್ಯರಿಂದ ಬರೆಸಿಕೊಂಡು ಪ್ರಶಸ್ತಿ ಪಡೆಯುವರಲ್ಲವೆಂದು ಸೂಚಿಸಲು.

## ವಾರದ ಪ್ರಶ್ನೆ

ಕೆ.ವಿ. ಗೋವಿಂದಾಚಾರಿ, ಮೈಸೂರು
ವಾಹಿನಿಗಳು ಬ್ರೇಕಿಂಗ್ ನ್ಯೂಸ್ ಬಿತ್ತರಿಸುವ ಸಮಯದಲ್ಲಿ ಭಾರಿ ಸದ್ದು ಮಾಡುವುದೇಕೆ?
ಸುದ್ದಿ ಧ್ವನಿಪೂರ್ಣವಾಗಿಲ್ಲದಿದ್ದರೆ ಆಕರ್ಷಿಸಲು ಪೂರ್ಣ ಧ್ವನಿಯೇ ಗತಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹೆಣ್ಣಿಗೂ, ಕನ್ನಡಿಗೂ ಎಷ್ಟು ದೂರ?
ಉತ್ತರಿಸಲು ಅವಳ ನೇತ್ರಪರೀಕ್ಷೆಯ (ಸಮೀಪ/ದೂರದೃಷ್ಟಿಯ) ರಿಪೋರ್ಟ್ ಬೇಕಾಗುತ್ತದೆ.

ಮಹಾವೀರ ಕಾಸರ, ಶಿವಮೊಗ್ಗ
ಕಳಪೆ ಪ್ರದರ್ಶನ ನೀಡಿದ ಕ್ರಿಕೆಟ್ ಆಟಗಾರರಿಗೆ ಏನು ಶಿಕ್ಷೆ?
ಜಾಹೀರಾತಿನಿಂದ ಹೊರಹಾಕುವುದು.

ಬಿ. ಚಂದ್ರೇಗೌಡ, ಬೆಂಗಳೂರು
ದಾಂಪತ್ಯದಲ್ಲಿ ಪಥ್ಯದ ಪಾತ್ರವೇನು?




ಸುನೀತಿಯ ‘ಪಥ’ಕ್ಕೆ ‘ಯಾ’ವತ್ತೂ ಹೊಂದಿಕೊಂಡಿರಬೇಕು ಎಂಬುದೇ ಪಥ್ಯ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ವಿಶ್ವ ಮಾನವರನ್ನೇ ಸಂಕುಚಿತಗೊಳಿಸುತ್ತಿದ್ದೇವಲ್ಲ?
ಬೊಗಳುವ ನಾಯಿಗೆ ರಾಜನಾದರೇನು, ತಿರುಕನಾದರೇನು!

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಮೋಸಗಾರರ ಬಲವಾದ ಆಯುಧ ಯಾವುದು?
ಬಲೆಗೆ ಬೀಳುವವರ ಅಪ್ಪಟ ಮೊದ್ದುತನ.

ಅಮರಯ್ಯಾ ಪತ್ರಿಮಠ, ಸುರಪುರ
ಸೃಷ್ಟಿಯನ್ನು ಎಂತಹ ದೃಷ್ಟಿಯಲ್ಲಿ ನೋಡಬೇಕು?
ಸಂತುಷ್ಟಿಯ ದೃಷ್ಟಿಯಲ್ಲಿ.

■ **ರಾಮ್**